## ಹೆಣ ಬಿದ್ದ ಮೇಲೇ ನಿದ್ದೆ

ನಮ್ಮ ಸ್ನೇಹಿತರೊಬ್ಬರನ್ನು ಭೇಟಿ ಮಾಡಲು ಅವರ ಮನೆಗೆ ಹೋಗಿದ್ದೆವು. ನಮ್ಮ ಸ್ನೇಹಿತರಿಗೆ ಕ್ರಿಕೆಟ್, ರಾಜಕೀಯ ಸಂಗೀತದಲ್ಲಿ ಆಸಕ್ತಿ ಹೆಚ್ಚು. ಅವರ ಪತ್ನಿಗೆ ಧಾರಾವಾಹಿ ಹಾಗೂ ಕ್ರೈಂ ಸ್ಟೋರಿ ನೋಡುವ ಆಸಕ್ತಿ. ಅವರ ಈ ವಿಭಿನ್ನ ಅಭಿರುಚಿಯ ಕಾರಣ ಮನೆಯಲ್ಲಿ ರೂಮಿನಲ್ಲೊಂದು, ಹಾಲಿನಲ್ಲೊಂದು ಟೀವಿ ಇಟ್ಟುಕೊಂಡಿದ್ದಾರೆ. ಊಟೋಪಚಾರ ಮುಗಿದ ಮೇಲೆ ನಾನು ಕುತೂಹಲಕ್ಕೆ ಕೇಳಿದೆ, 'ರಾತ್ರಿ ಮಲಗಲು ಎಷ್ಟು ಹೊತ್ತಾಗುತ್ತದೆ?' ಎಂದು. ಸ್ನೇಹಿತರು, 'ನಾನಂತೂ ರಾತ್ರಿ ಹತ್ತು ಗಂಟೆಗೇ ಮಲಗಿಬಿಡುತ್ತೇನೆ, ಆದರೆ ನನ್ನ ಹೆಂಡತಿ ಮಾತ್ರ ರಾತ್ರಿ ನಾಲ್ಕು ಹೆಣ ಬಿದ್ದಮೇಲೇ ಮಲಗೋದು' ಎಂದರು. ಆಗ ಅವರ ಪತ್ನಿ ನಗುತ್ತಾ, 'ಅಯ್ಯೋ ನಾನು ಕ್ರೈಂ ಸ್ಟೋರಿ ನೋಡ್ತೀನಿ ಅಂತ ರೇಗಿಸ್ತಾರೆ ನೋಡಿ' ಎಂದರು!

**ಬಿ.ಕೆ. ನರಸಿಂಹ ಮೂರ್ತಿ**





ಚಿತ್ರಗಳು: ಗಣೇಶ ಆಚಾರ್ಯ

## ಕಾಫಿ ಫಿಲ್ಟರ್ ಉಚಿತ

ನಾವು ಸಕಲೇಶಪುರದಿಂದ ನಮಗೆ ಬೇಕಾದ ಬ್ಲೆಂಡಿಂಗ್‌ನಲ್ಲಿ ಕಾಫಿಪುಡಿ ಮಾಡಿಸಿ ತರಿಸಿ ಅದನ್ನು ಆಪ್ತ ವರ್ಗದವರಿಗೆ ರಿಯಾಯ್ತಿ ದರದಲ್ಲಿ ಕೊಡುತ್ತೇವೆ. ಬಟ್ಟೆ ಇಸ್ತ್ರಿ ಮಾಡುವಾಗ ನನಗೊಂದು ಐಡಿಯಾ ಹೊಳೆಯಿತು. ನನ್ನ ಪತ್ನಿಗೆ ಹೇಳಿದೆ, 'ಕಾಲು ಕೆಜಿ ಕಾಫಿಪುಡಿ ಕೊಂಡರೆ ಕಾಫಿ ಫಿಲ್ಟರ್ ಉಚಿತ' ಎಂದು. 'ಫಿಲ್ಟರ್ ಎಲ್ಲಿಂದ ತರ್ತೀರಿ?' ಎಂದಳು. ಹರಿದ ಹಳೆಯ ಮಲ್ ಪಂಚೆಯನ್ನು ಆಕೆಗೆ ನೀಡುತ್ತಾ, 'ಇದನ್ನು ಚೆನ್ನಾಗಿ ಒಗೆದು, ಒಣಗಿಸಿ, ಇಸ್ತ್ರಿ ಮಾಡಿ ಒಂದಡಿ, ಉದ್ದ ಒಂದಡಿ ಅಗಲಕ್ಕೆ ಕತ್ತರಿಸಿದರೆ ಅದೇ ಕಾಫಿ ಫಿಲ್ಟರ್!' ಅಂದೆ. ನನ್ನ ಈ ಹೊಸ ಪ್ಲಾನ್ ಹೈದರಾಬಾದ್‌ನಲ್ಲಿರುವ ಮಗಳು–ಮೊಮ್ಮಗನ ಕಿವಿಗೂ ಬಿದ್ದು ಅವರನ್ನೂ ನಗುವಂತೆ ಮಾಡಿತು.

**ಕೊ.ಸು. ನರಸಿಂಹ ಮೂರ್ತಿ**